ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಹೌದು

ಆ) ಪ್ರಸ್ತುತ ಸಾಲಿನಲ್ಲಿ ವೀರಭದ್ರೇಶ್ವರ ದೇವಾಲಯದ ಬಳಿ ರೂ 12 13 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ನಿರ್ಮಿಸಲು ಕಾರ್ಯಾದೇಶ ನೀಡಲಾಗಿದೆ

934 (402) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಗದಗ ಜಿಲ್ಲೆ ಗದಗ ತಾಲ್ಲೂಕು ಲಕ್ಕುಂಡಿ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು,

ಆ) ಅದಕ್ಕೆ ಸರ್ಕಾರದಿಂದ ಎಷ್ಟು ಹಣಕಾಸು ನೆರವು ಒದಗಿಸಲಾಗಿದೆ?

ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)

ಅ) ಅ) ಲಕ್ಕುಂಡಿಯಲ್ಲಿ 8 86 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ನಿರ್ಮಿಸಲಾಗಿದ್ದು, ಈಗಾಗಲೆ ಪ್ರವಾಸಿಗರಿಗಾಗಿ ತೆರೆಯಲಾಗಿದೆ

ಆ) 40 00 ಲಕ್ಷ ರೂ ಗಳ ಅಂದಾಜು ವೆಚ್ಚದಲ್ಲಿ ಹೆದ್ದಾರಿ ಸೌಲಭ್ಯವನ್ನು ನಿರ್ಮಿಸಿದ್ದು ಕಾಮಗಾರಿ ಪೂರ್ಣಗೊಂಡಿರುತ್ತದೆ ಸದರಿ ಸೌಲಭ್ಯವನ್ನು ನಿರ್ವಹಣೆಗಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ವಹಿಸಲು ಪರಿಶೀಲಿಸಲಾಗುತ್ತಿದೆ

ಇ) ಪ್ರಸ್ತುತ ಸಾಲಿನಲ್ಲಿ ಲಕ್ಕುಂಡಿಯಲ್ಲಿ 12 13 ಲಕ್ಷಗಳ ಅಂದಾಜು ವೆಚ್ಚದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ನಿರ್ಮಿಸಲು ಕಾರ್ಯಾದೇಶ ನೀಡಲಾಗಿದೆ

ಈ) ಒಟ್ಟು 60 99 ಲಕ್ಷ ರೂಪಾಯಿಗಳನ್ನು ಮೇಲ್ಕಂಡ ಸೌಲಭ್ಯಗಳ ನಿರ್ಮಾಣಕ್ಕಾಗಿ ಒದಗಿಸಲಾಗಿದೆ

935 (403) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಯಶಸ್ವಿನಿ ಯೋಜನೆಯಲ್ಲಿ ನಹಾಯವಾದ ಫಲಾನುಭವಿಗಳು ಮತ್ತು ಖರ್ಚಾದ ಹಣ ಎಷ್ಟು, (ತಾಲ್ಲೂಕುವಾರು ವಿವರ ನೀಡುವುದು)

ಆ) ಯಶಸ್ವಿನಿ ಯೋಜನೆಯಲ್ಲಿ ಯಾವ ಯಾವ ರೋಗಗಳಿಗೆ ಚಿಕಿತ್ಸೆ ಇದೆ,

ಇ) ಯಶಸ್ವಿನಿ ಯೋಜನೆ ಕುಟುಂಬದ ಎಲ್ಲಾ ಸದಸ್ಯರಿಗೆ ಅನ್ವಯಿಸುತ್ತದೆಯೇ,

ಈ) ಈ ಯೋಜನೆಯ ಫಲಾನುಭವಿಗಳಿಗೆ ಖರ್ಚಾದ ಹಣವನ್ನೆಲ್ಲ ನೀಡಲಾಗುವುದೇ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ದಿನಾಂಕ 31–1–2007ಕ್ಕೆ ಇರುವಂತೆ 356531 ಫಲಾನುಭವಿಗಳಿಗೆ ಯಶಸ್ವಿನಿ ಯೋಜನೆಯಿಂದ ಸಹಾಯವಾಗಿರುತ್ತದೆ ಈ ಪೈಕಿ 313053 ಫಲಾನುಭವಿಗಳಿಗೆ ಉಚಿತ ಹೊರರೋಗ ಚಿಕಿತ್ಸೆ ಮತ್ತು 67890 ಫಲಾನುಭವಿಗಳಿಗೆ ನಗದು ರಹಿತ ಶಸ್ತ್ರಚಿಕಿತ್ಸೆಯ ಸಹಾಯ ಆಗಿರುತ್ತದೆ ಈ ಬಗ್ಗೆ ಖರ್ಚಾದ ಒಟ್ಟು ಹಣ ರೂ 79 11 ಕೋಟಿ ವೆಚ್ಚವಾಗಿ ಇರುತ್ತದೆ ಜಿಲ್ಲಾವಾರು ವಿವರ ಲಗತ್ತಿಸಿದೆ

ಆ) ಯಶಸ್ವಿನಿ ಯೋಜನೆಯು ಪ್ರಾರಂಭದಲ್ಲಿ ಯಶಸ್ವಿನಿ ಟ್ರಸ್ಟ್ ಗುರುತಿಸಿದ 1600 ಶಸ್ತ್ರಚಿಕಿತ್ಸೆಗಳಿಗೆ ಮಾತ್ರ ಲಭ್ಯ ಇತ್ತು 2006–07ನೇ ಸಾಲಿನಿಂದ ಯಶಸ್ವಿನಿ ಯೋಜನೆಯ ಸೌಲಭ್ಯವನ್ನು ತುರ್ತು ವೈದ್ಯಕೀಯ ಚಿಕಿತ್ಸೆ ನವಜಾತ ಶಿಶುವಿನ ರಕ್ಷಣೆ, ಸಹಜ ಹೆರಿಗೆ ಮತ್ತು ಆ್ಯಂಜಿಯೋಪ್ಲಾಸ್ಟಿ ಪ್ರೋಸೀಜರ್‌ಗಳಿಗೂ ವಿಸ್ತರಿಸಲಾಗಿದೆ

ಇ) ಯಶಸ್ವಿನಿ ಯೋಜನೆಯು ಪ್ರಾರಂಭದಲ್ಲಿ ಸಹಕಾರಿ ರೈತರಿಗೆ ಮತ್ತು ಅಂತಹ ರೈತ ಸದಸ್ಯರ ಗಂಡ/ಹೆಂಡತಿ ಮತ್ತು ಅವಲಂಬಿತ ಇಬ್ಬರು ಮಕ್ಕಳಿಗೆ ಮಾತ್ರ ಲಭ್ಯವಿತ್ತು ಈಗ ಯೋಜನೆಯ ಸೌಲಭ್ಯವನ್ನು ಕುಟುಂಬದ ಎಲ್ಲಾ ಸದಸ್ಯರಿಗೆ ವಿಸ್ತರಿಸಲಾಗಿದೆ

ಈ) ಯೋಜನೆಯಲ್ಲಿ ಜಾಯಿಂಟ್ ಬದಲಾವಣೆ, ಸುಟ್ಟ ಗಾಯಗಳು, ರಸ್ತೆ ಅಪಘಾತಗಳು, ಹಲ್ಲಿನ ಶಸ್ತ್ರ ಚಿಕಿತ್ಸೆ, ಚರ್ಮದ ಗ್ರಾಫ್ಟಿಂಗ್, ಕಿಡ್ನಿ ಟ್ರಾನ್ಸ್‌ಪ್ಲಾಂಟ್, ಹಾರ್ಟ್‌ಟ್ರಾನ್ಸ್‌ಪ್ಲಾಂಟ್, ಇಂಪ್ಲಾಂಟ್, ಸ್ಟೆಂಟ್ ಇತ್ಯಾದಿ ಸೇರಿರುವುದಿಲ್ಲ ಆದ್ದರಿಂದ, ಅವುಗಳ ವೆಚ್ಚವನ್ನು ಯಶಸ್ವಿನಿ ಟ್ರಸ್ಟ್ ಭರಿಸುವುದಿಲ್ಲ ಔಷಧಿ ವೆಚ್ಚ ಮತ್ತು ಆರೋಗ್ಯ ತಪಾಸಣಾ ವೆಚ್ಚವನ್ನು ಟ್ರಸ್ಟ್ ಭರಿಸುವುದಿಲ್ಲ ಆದಾಗ್ಯೂ, ಯಶಸ್ವಿನಿ ಟ್ರಸ್ಟ್ ಗುರುತಿಸಿದ ಶಸ್ತ್ರ ಚಿಕಿತ್ಸೆಗಳ ವೆಚ್ಚ ಮತ್ತು ಶಸ್ತ್ರ ಚಿಕಿತ್ಸೆ ಪ್ರಾರಂಭವಾದಾಗಿನಿಂದ ಫಲಾನುಭವಿ ಗುರುತಿಸಿದ ಆಸ್ಪತ್ರೆಯಿಂದ ಬಿಡುಗಡೆಯಾಗುವವರೆಗಿನ ಬೆಡ್ ಖರ್ಚು, ವೈದ್ಯರ ಫೀ, ನರ್ಸ್ ಚಾರ್ಜು, ಶಸ್ತ್ರ ಚಿಕಿತ್ಸೆಯ ವೆಚ್ಚ ಔಷಧಿ, ಇಂಜೆಕ್ಷನ್ ಇತ್ಯಾದಿಗಳಿಗೆ ಆದ ವೆಚ್ಚವನ್ನು ಯಶಸ್ವಿನಿ ಟ್ರಸ್ಟ್ ಗುರುತಿಸಿದ ಆಸ್ಪತ್ರೆಗಳಿಗೆ ನಿಗದಿಗೊಳಿಸಿದ ದರದಲ್ಲಿ ನೇರವಾಗಿ ನೀಡುತ್ತದೆ

ಅನುಬಂಧ–1

ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆ

ಉಚಿತ ಹೊರರೋಗ ಚಿಕಿತ್ಸೆಗಳ ಜಿಲ್ಲಾವಾರು ವಿವರ

ಕ್ರ.ಸಂ	ಜಿಲ್ಲೆ	2003–04	2004–05	2005–06	2006–07	ಒಟ್ಟು
1	ಬಾಗಲಕೋಟೆ	313	1613	2138	8137	12201
2	ಬೆಂಗಳೂರು	4810	8386	4939	12535	30670
3	ಬೆಳಗಾವಿ	2936	1945	2479	16584	23944
4	ಬಳ್ಳಾರಿ	484	376	253	188	1301
5	ಬೀದರ್	730	979	2001	11571	15281
6	ಬಿಜಾಪುರ	107	1473	1222	1167	3969
7	ಚಾಮರಾಜನಗರ	132	257	337	3121	3847
8	ಚಿಕ್ಕಮಗಳೂರು	432	1450	2408	10822	15112
9	ಚಿತ್ರದುರ್ಗ	1542	2648	5239	4707	14136
10	ದಕ್ಷಿಣ ಕನ್ನಡ	677	1321	1686	1095	4779
11	ದಾವಣಗೆರೆ	4167	3155	2539	15041	24902
12	ಧಾರವಾಡ	279	559	1132	4164	6134
13	ಗದಗ್	558	701	546	2309	4114

ಕ್ರ ಸಂ	ಜಿಲ್ಲೆ	2003–04	2004–05	2005–06	2006–07	ಒಟ್ಟು
14	ಗುಲಬರ್ಗಾ	223	211	327	585	1346
15	ಹಾಸನ	1149	1969	2647	12531	18296
16	ಹಾವೇರಿ	408	2455	1275	8695	12833
17	ಕೊಡಗು	530	753	733	307	2323
18	ಕೋಲಾರ	2420	2965	3272	13321	21978
19	ಕೊಪ್ಪಳ	83	289	248	244	864
20	ಮಂಡ್ಯ	4804	6368	7150	30184	48506
21	ಮೈಸೂರು	4111	3180	3674	4065	15030
22	ರಾಯಚೂರು	566	1011	957	1551	4085
23	ಶಿವಮೊಗ್ಗ	681	1068	1770	1328	4847
24	ತುಮಕೂರು	1960	1928	1398	2249	7535
25	ಉತ್ತರ ಕನ್ನಡ	224	1074	1935	1305	4538
26	ಉಡುಪಿ	1488	2040	587	6367	10482
	ಒಟ್ಟು	**35814**	**50174**	**52892**	**174173**	**313053**

ಸಿಓ 37 ಸಿಎಲ್‌ಎಸ್ 2007

ಅನುಬಂಧ–2

ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆ

ಶಸ್ತ್ರ ಚಿಕಿತ್ಸೆಗಳ ಜಿಲ್ಲಾವಾರು ವಿವರ

ಕ್ರ. ಸಂ	ಜಿಲ್ಲೆ	2003–04		2004–05		2005–06		2006–07		ಒಟ್ಟು	
		ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	2	3	4	5	6	7	8	9	10	11	12
1	ಬಾಗಲಕೋಟೆ	88	1437751	376	4898300	831	10407900	1029	9024350	2324	25768301
2	ಬೆಂಗಳೂರು	767	12432024	1148	15031400	1154	19934750	1398	16478000	4467	63876174
3	ಬೆಳಗಾವಿ	431	6013239	539	9301000	680	15353150	1005	14091900	2655	44759289
4	ಬಳ್ಳಾರಿ	147	1879000	168	2999500	279	4291500	374	5650400	968	14820400
5	ಬೀದರ್	329	3289970	457	4750600	380	4853950	396	3821100	1562	16815620
6	ಬಿಜಾಪುರ	23	301500	309	4270200	680	9482100	920	9562000	1932	23615800
7	ಚಾಮರಾಜ ನಗರ	155	2027100	320	4241900	355	5136500	497	5044250	1327	16449750
8	ಚಿಕ್ಕಮಗಳೂರು	203	2682482	509	6607900	633	8533400	866	7878600	2211	25702382
9	ಚಿತ್ರದುರ್ಗ	231	2744795	495	5589600	848	9305650	999	9519300	2573	27159345
10	ದಕ್ಷಿಣ ಕನ್ನಡ	201	3373988	297	4602400	449	6659032	572	6107700	1519	20743120
11	ದಾವಣಗೆರೆ	682	5987145	1052	10518300	1442	16631150	1608	15178850	4784	48315445

1	2	3	4	5	6	7	8	9	10	11	12
12	ಧಾರವಾಡ	31	275000	93	1310500	106	1782950	186	1986650	416	5355100
13	ಗದಗ್	54	585775	150	1776200	196	3144950	393	3560950	793	9067875
14	ಗುಲಬರ್ಗಾ	48	1274415	140	3518500	329	7222250	707	9134800	1224	21149965
15	ಹಾಸನ	771	7103667	1376	13889250	1658	17156250	1664	12700500	5469	50849667
16	ಹಾವೇರಿ	66	848200	257	3176200	443	5562225	840	6411750	1606	15998375
17	ಕೊಡಗು	125	1542001	189	2751000	240	3832850	223	2627750	777	10753601
18	ಕೋಲಾರ	579	6840783	1494	16619200	1707	19536550	1788	16257200	5568	59253733
19	ಕೊಪ್ಪಳ	90	1548365	157	2551700	243	3566850	286	3508800	776	11175715
20	ಮಂಡ್ಯ	1590	15608386	2360	23533000	2643	27858700	2748	22690600	9341	89690686
21	ಮೈಸೂರು	671	7937550	667	10137600	828	13857450	773	10055800	2939	41988400
22	ರಾಯಚೂರು	167	2227940	339	4835500	500	6939050	726	6924200	1732	20926690
23	ಶಿವಮೊಗ್ಗ	322	3673725	449	5877000	625	8251850	629	7245950	2025	25048525
24	ತುಮಕೂರು	611	7515871	913	10829900	1108	15094950	1384	15795700	4016	49236421
25	ಉತ್ತರ ಕನ್ನಡ	59	891000	184	2624200	385	5165500	644	6127000	1272	14807700
26	ಉಡುಪಿ	606	6493745	798	8379200	935	12132650	1275	11013250	3614	38018845
	ಒಟ್ಟು	**9047**	**106535417**	**15236**	**184720050**	**19677**	**261694107**	**23930**	**238397350**	**67890**	**791346924**